ಸಿ.ಸಿ. ನಂ. : 374/2016

ಪಿ.ಡಬ್ಲ್ಯೂ: 3 ಸಿ.ಡಬ್ಲ್ಯೂ: 27

## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

| | | |
|---|---|---|
| ಸಾಕ್ಷಿದಾರರ ಹೆಸರು | : | ವಾಸುದೇವ |
| ತಂದೆಯ ಹೆಸರು | : | ನಾರಾಯಣ ನಾಯ್ಕ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಡಿ.ವೈ.ಎಸ್.ಪಿ. |
| ವಾಸ್ತವ್ಯ | : | ಹಬ್ಬುವಾಡಾ, ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ ದಿಃ 18-07-2023

## ದಂಡ ಪ್ರಕ್ರಿಯೇ ಸಂಹಿತೆ ಕಲಂ. 299 ರಡಿ ಸಾಕ್ಷಿಯ ಹೇಳಿಕೆಃ

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ.ರವರಿಂದಃ**

ನಾನು ಅಗಸ್ಟ 2002 ರಿಂದ ಮಾರ್ಚ 2004 ರವರೆಗೆ ಕಾರವಾರ ಶಹರ ಪೊಲೀಸ್ ಠಾಣೆಯಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಚಾಸಾ.26 ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿರುತ್ತೇನೆ.

ದಿಃ 16-01-2003 ರಂದು ಗುನ್ನಾ ಜಾಗದ ಪಂಚನಾಮೆಯನ್ನು ಚಾಸಾ.1 ರವರು ತೋರಿಸಿದಂತೆ ಪಂಚನಾಮೆ ಜರುಗಿಸಿ ಪಂಚರಾದ ಚಾಸಾ.2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿ ಗುನ್ನಾ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ. ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ಕಚ್ಚಾ ನಕ್ಷೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ಸಾಕ್ಷಿದಾರರಾದ ಚಾಸಾ.8, ಚಾಸಾ.2, ಚಾಸಾ.11 ರವರ ಹೇಳಿಕೆಗಳನ್ನು

ಪಡೆದುಕೊಂಡಿರುತ್ತೇನೆ. ಚಾಸಾ.2 ರವರು ನನ್ನ ಮುಂದೆ ನಿಪಿ.3 ಮತ್ತು 4 ರಂತೆ ಹೇಳಿಕೆಯನ್ನು ನೀಡಿರುತ್ತಾರೆ.

ದಿಃ 22-08-2003 ರಂದು ಪುಣಾದ ವಡಗಾಂವ ನಲ್ಲಿ ಬೆಳಿಗ್ಗೆ 10-00 ಗಂಟೆಗೆ ಫಿರೋಜ್ ಅಲಿಯಾಸ್ ಶೇಖ ರವರನ್ನು ವಶಕ್ಕೆ ಪಡೆದು ಅವರ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅವರನ್ನು ಜೆ.ಎಂ.ಎಫ್.ಸಿ ವಡಗಾಂವ ಮುಂದೆ ಹಾಜರುಪಡಿಸಿ ಪೊಲೀಸರ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ.

ದಿಃ 26-08-2003 ರಂದು ಪುಣೆಯಲ್ಲಿ 1 ನೇ ಆರೋಪಿ ತೋರಿಸಿದ ಜೆನ್ ಕಾರ್ ನಂ. ಎಂ.ಹೆಚ್.06-ಎಫ್-9364 ಪಂಚರಾದ ಚಾಸಾ.4 ಮತ್ತು 5 ರವರ ಸಮಕ್ಷಮ ಪಂಚನಾಮೆಯಡಿಯಲ್ಲಿ ವಶಪಡಿಸಿಕೊಂಡಿರುತ್ತೇನೆ.. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 27-08-2003 ರಂದು ಸದ್ರಿ ಕಾರಿನ ಸ್ವತ್ತು ಪಟ್ಟಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಪುಣೆಯ ಪ್ರಭಾತ ರಸ್ತೆಯಲ್ಲಿ ಕೆಎ-04-ಪಿ-7389 ಮಾರುತಿ-800 ಕಾರನ್ನು ಸಂಜೆ 15-00 ರಿಂದ 16-00 ಗಂಟೆಗೆ ಪಂಚನಾಮೆಯಡಿಯಲ್ಲಿ ವಶಪಡಿಸಿಕೊಂಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ಸದ್ರಿ ವಾಹನದ ಕುರಿತು ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿ ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1 ನೇ ಆರೋಪಿಯನ್ನು ಜೆ.ಎಂ.ಎಫ್.ಸಿ ನ್ಯಾಯಾಲಯ ಕಾರವಾರಕ್ಕೆ ಹಾಜರುಪಡಿಸಿ ಪೊಲೀಸ್ ಕಸ್ಟಡಿಗೆ ಪಡೆದಿರುತ್ತೇನೆ.

2 ನೇ ಆರೋಪಿ ಪುಣೆಯ ಸಹಕಾರ ನಗರ ಪೊಲೀಸ್ ಠಾಣೆಯ ಗುನ್ನಾ ನಂ. 23/2003 ರಲ್ಲಿ ದಸ್ತಗಿರಿಯಾಗಿದ್ದು ಯರವಾಡಾ ಜೈಲಿ ಯು.ಟಿಪಿ. 5927 ರವರ ಬಾಡಿ ಕೋರಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

ದಿಃ 04-10-2003 ರಂದು ಅಮದಳ್ಳಿಯಲ್ಲಿ 3 ನೇ ಆರೋಪಿ ರವರನ್ನು ದಸ್ತಗಿರಿ ಮಾಡಿರುತ್ತೇನೆ. ಅವರ ಜೊತೆ ಇದ್ದ ಇನ್ನೊಬ್ಬ ಆರೋಪಿ ತಪ್ಪಿಸಿಕೊಂಡು ಓಡಿ ಹೋಗಿರುತ್ತಾನೆ. 3 ನೇ ಆರೋಪಿಯ ವಶದಲ್ಲಿದ್ದ ಬುಲೆರೋ ವಾಹನವನ್ನು ಪಂಚರಾದ ಪ್ರಶಾಂತ ಮತ್ತು ದೀಪಕರವರ ಸಮಕ್ಷಮ ಪಂಚನಾಮೆಯಡಿಯಲ್ಲಿ ವಶಪಡಿಸಿಕೊಂಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 10-10-2003 ರಂದು ಟಾಟಾ ಇಂಡಿಕಾ ಕಾರ್ ನಂ. ಕೆಎಲ್.04-ಎನ್.4394 ಮತ್ತು ಎ.ಪಿ.29-ಬಿ-1181 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 11-10-2003 ರಂದು ಮಾರುತಿ ಕಾರ ನಂ. ಎ.ಪಿ. 29-ಬಿ-1259 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 12-10-2003 ರಂದು ಮಾರುತಿ ಜೆನ್ ಕಾರ್ ನಂ. ಎಪಿ-29-ಎ-1670 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 13-10-2003 ರಂದು ಟೋಯಟಾ ಕ್ವಾಲೀಸ್ ಕಾರ್ ನಂ. ಕೆಎಲ್.01-ಝುಡ್-7263 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ಅದೇ ದಿನ ಮಾರು ಓಮ್ನಿ ಕೆಎ-10-ಎನ್-7319 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 15-10-2003 ರಂದು ಟೊಯಟಾ ಕ್ವಾಲೀಸ್ ಕಾರ ನಂ. ಕೆಎ-20-ಎ-2484 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 24-10-2003 ರಂದು ಅಮದಳ್ಳಿಯಲ್ಲಿ ಬುಲೆರೋ ಗಾಡಿಯಲ್ಲಿ ತಪ್ಪಿಸಿಕೊಂಡು ಓಡಿ ಹೋದ 4 ನೇ ಆರೋಪಿಯನ್ನು ಬೆಳಗಾಂವನಲ್ಲಿ ದಸ್ತಗಿರಿ ಮಾಡಿ ಅವರ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 23-10-2003 ರಂದು ಮಾರುತಿ ಕಾರ್ ನಂ. ಕೆಎ-19 ಎನ್.1828, ಮಾರುತಿ ಜೆನ್ ಕಾರ ನಂ. ಎಂ.ಹೆಚ್.09-ಎಬಿ.2259 ಮತ್ತು ಇಂಡಿಕಾ ಕಾರ್ ನಂ. ಎಂ.ಹೆಚ್.09-ಎಬಿ-2731 ನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದ್ರಿ ಪಂಚನಾಮೆಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ.

ದಿಃ 30-10-2003 ರಂದು ಮಹಮ್ಮದ್ ಹನೀಫ ಇತನ ಕಲಂ. 164 ಹೇಳಿಕೆಯನ್ನು ಪುರೈಸಲು ಸಿ.ಜೆ.ಎಂ. ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

ದಿಃ 07-11-2003 ರಂದು 1 ಮತ್ತು 3 ನೇ ಆರೋಪಿತರನ್ನು ಪೊಲೀಸ ವಶಕ್ಕೆ ಪಡೆದುಕೊಂಡಿರುತ್ತೇನೆ. 3 ನೇ ಆರೋಪಿಯ ಸ್ವಖುಷಿ ಹೇಳಿಕೆಯಂತ ಉಡುಪಿಯ ಹನೀಫ

ರವರ ಮನೆಗೆ ಕ್ವಾಲೀಸ್ ಗಾಡಿ ಕೆಎಲ್–13–ಹೆಚ್.3863 ನ್ನು ಪಂಚನಾಮೆಡಿಯಲ್ಲಿ ವಶಪಡಿಸಿಕೊಂಡು ಪಂಚನಾ ಿಮ ಮಾಡಿರುತ್ತೇನ. ಸದ್ರಿ ಪಂಚನಾಮೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ಮಹಮ್ಮದ ಹನೀಫ ಇತನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾ.ಸಾ.2,9,10,11,12, 13, 14,16,17,18,19,20,21,22,23,24 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಹಾಗೂಚಾಸಾ.1,2,8,10,11,12,13,ರವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ನನಗೆ ವರ್ಗಾವಣೆಯಾದ ಕಾರಣ ಚಾಸಾ.28 ರವರಿಗೆ ಮುಂದಿನ ತನಿಖೆಗೆ ಕಡತವನ್ನು ವಹಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿಯಿಂದಃ**

ಆರೋಪಿ ತಲೆ ಮರೆಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಮುಖ್ಯ ನಾಯಿಕ ದಂಡಾಧಿಕಾರಿಗಳು,
ಕಾರವಾರ

ಸಿ.ಸಿ. ನಂ. : 374/2016
ಪಿ.ಡಬ್ಲ್ಯೂ: 3 ಸಿ.ಡಬ್ಲ್ಯೂ: 27

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ.ಸ.ಅ. ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು )**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

*(ಸಾಕ್ಷಿದಾರರು ಸಂಪೂರ್ಣವಾಗಿ ಕೊಂಕಣಿ ಭಾಷೆ ಮಾತನಾಡುವವರಾಗಿದ್ದು ಆದ್ದರಿಂದ ಈ ನ್ಯಾಯಾಲಯದ ವಕೀಲರಾಗಿರುವ ಶ್ರೀ ವಿ.ಎ.ಟಿ. ವಕೀಲರನ್ನು ಸಾಕ್ಷಿದಾರರು ಕೊಂಕಣಿ ಭಾಷೆಯಲ್ಲಿ ಹೇಳುವ ವಿಷಯವನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಿ ನ್ಯಾಯಾಲಯಕ್ಕೆ ತಿಳಿಸಲು ನೇಮಿಸಿಕೊಳ್ಳಲಾಯಿತು. ಶ್ರೀ ವಿ.ಎ.ಟಿ. ವಕೀಲರು ತಮಗೆ ಕೊಂಕಣಿ ಮತ್ತು ಕನ್ನಡ ಭಾಷೆ ಗೊತ್ತಿರುವುದಾಗಿ ತಿಳಿಸಿರುತ್ತಾರೆ. ಶ್ರೀ ವಿ.ಎ.ಟಿ. ವಕೀಲರಿಗೆ ಪ್ರಮಾಣ ವಚನ ಭೋಧಿಸಲಾಯಿತು)*